ಶ್ರೀ ಎಸ್. ಬಂಗಾರಪ್ಪ.—ಸಭಾಧ್ಯಕ್ಷರೇ, ಈ ವಿಚಾರ ನನಗೂ ಕೂಡ ಗೊತ್ತಿದೆ. ಈ ವಿಚಾರದಲ್ಲಿ ಸುಮಾರು ೫೦-೬೦ ಜನರು ಬಂದು ನನ್ನನ್ನು ಭೇಟಿ ಮಾಡಿದರು. ಅಲ್ಲಿರತಕ್ಕಂಥ ಡಿ.ಎಫ್.ಒ. ಮೇಲೆ ವೈಯಕ್ತಿಕವಾಗಿ ನಮಗೆ ಯಾವ ದ್ವೇಷವೂ ಇಲ್ಲ. ಆದರೆ, ಸೈಕಲ್ ಮೇಲೆ ಒಣ ಕಟ್ಟಿಗೆಯನ್ನು ಇಟ್ಟುಕೊಂಡು ಮಾರಾಟ ಮಾಡತಕ್ಕಂಥ ಬಡವರನ್ನು ಸಿಕ್ಕಾಪಟ್ಟೆ ಹೊಡೆದು ಲಾರಿಗಳಿಗೆ ತುಂಬಿದ್ದಾರೆ. ಅಲ್ಲಿ ಡೆಮಾನ್‌ಸ್ಟ್ರೇಷನ್ ಕೂಡ ನಡೆದಿದೆ, ಇದು ಚುನಾವಣೆ ದಿವಸವೇ ನಡೆದಿದೆ. ಡಿ.ಎಫ್.ಒ. ಅನ್ನು ಕಂಟ್ರೋಲ್ ಮಾಡಿ, ಜನರಿಗೆ ತೊಂದರೆ ಮಾಡದ ರೀತಿಯಲ್ಲಿ ನೀವು ನೋಡಿಕೊಳ್ಳುವುದಾದರೆ, ಅವರು ಅಲ್ಲಿಯೇ ಇರಲಿ. ಆದರೆ, ಇದೇ ರೀತಿ ಡಿ.ಎಫ್.ಒ. ಅವರ ವರ್ತನೆ ಮುಂದುವರಿದರೆ ಜನರಿಗೆ, ಅದರಲ್ಲೂ ಬಡ ರೈತರಿಗೆ, ಬಹಳ ತೊಂದರೆ ಆಗುತ್ತದೆ. ನಾಳೆ ಸರ್ಕಾರದವರೇ ತೊಂದರೆಗೆ ಸಿಕ್ಕಿ ಹಾಕಿಕೊಳ್ಳಬಹುದು. ಆದ್ದರಿಂದ ಅಂಥಹವರನ್ನು ಬದಲಾವಣೆ ಮಾಡುವುದು ಒಳ್ಳೆಯದು. ಪ್ರಾಮಾಣಿಕವಾದ ಅಫೀಸರನ್ನು ಅಲ್ಲಿಗೆ ಹಾಕಿ.

ಅಧ್ಯಕ್ಷರು.—ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಲಿ.

ಶ್ರೀ ಬಿ.ಎ. ಜೀವಿಜಯ.—ಅಧ್ಯಕ್ಷರೇ, ಕೆಲಸ ಮಾಡುತ್ತಿರುವ ಅಧಿಕಾರಿ ಬಹಳ ದಕ್ಷ ಅಧಿಕಾರಿ. ಅವರು ರೈತರಿಗೆ ಏನಾದರೂ ಕಿರುಕುಳ ಕೊಟ್ಟಿದ್ದರೆ, ಅದನ್ನು ವಿಚಾರಣೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಹೇಳತಕ್ಕ ವಿಚಾರಗಳು ತುಂಬಾ ಇದೆ. ಆದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಲು ಇಚ್ಛಿಸುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಸೂಕ್ತ ಗಮನ ಕೊಡುತ್ತೇನೆ.

iii) ದ.ಕ. ಜಿಲ್ಲೆಯ ರೈತರು ಅಕ್ಕಿಯನ್ನು ಹಲ್ ಮಾಡುವಾಗ ಕಮರ್ಶಿಯಲ್ ಟ್ಯಾಕ್ಸ್ ಅಧಿಕಾರಿಗಳಿಂದ ಕಿರುಕುಳ.

ಶ್ರೀ ವಸಂತ ಬಂಗೇರ.—ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಬೆಳೆಸಿದ ಬತ್ತವನ್ನು ಹಲ್ ಮಾಡಿ ಅಕ್ಕಿಯನ್ನು ಬಡ ರೈತರು ಉಪಯೋಗ ಮಾಡುತ್ತಿದ್ದಾರೆ. ಹಿಂದೆ ಈ ರೀತಿ ಮಾಡಬೇಕಾದರೆ ರಿಜಿಸ್ಟರ್ ಮಾಡಬೇಕಿತ್ತು. ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನಲ್ಲಿ ವರ್ಷಕೊಂದು ಸಲ ೨೦೦ ರೂ. ಕಟ್ಟಿ ರಿಜಿಸ್ಟ್ರೇಷನ್ ಮಾಡಬೇಕು. ರೈತರು ತಮ್ಮ ಸ್ವಂತ ಉಪಯೋಗಕ್ಕಾಗಿ ಭತ್ತವನ್ನು ಹಲ್ ಮಾಡಿ ಅಕ್ಕಿಯನ್ನು ಉಪಯೋಗಿಸುತ್ತಿದ್ದಾರೆ. ಅವರು ಪ್ರತಿ ವರ್ಷ ೨೦೦ ರೂ. ಕಟ್ಟಿ ರಿಜಿಸ್ಟರ್ ಮಾಡಿಸಬೇಕು, ಮತ್ತು ಪ್ರತಿ ವರ್ಷ ಕಮರ್ಷಿಯಲ್ ಟ್ಯಾಕ್ಸ್ ಆಫೀಸಿಗೆ ಅಕೌಂಟ್ ಸಬ್‌ಮಿಟ್ ಮಾಡಬೇಕು. ಆದುದರಿಂದ ರೈತರು ಹಲ್ಲರ್ ಅನ್ನು ಉಪಯೋಗಿಸಲು ಸಾಧ್ಯವಾಗದಂಥಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನವರು ಬಲವಂತವಾಗಿ ರೈತರಿಂದ ೨೦೦ ರೂ. ವಸೂಲು ಮಾಡಿ ರಿಜಿಸ್ಟರ್ ಮಾಡಿಸಿಕೊಳ್ಳುತ್ತಿದ್ದಾರೆ. ರೈತರ ಮೇಲೆ ಅಗತಕ್ಕಂಥ ದಬ್ಬಾಳಿಕೆಯನ್ನು ನಿಲ್ಲಿಸಬೇಕು. ಇದಕ್ಕೆ ಸಂಬಂಧಪಟ್ಟ ಸಚಿವರು ಸೂಕ್ತ ಪರಿಹಾರ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—ರೈತರು ಉಪಯೋಗಿಸತಕ್ಕಂಥ ಭತ್ತವನ್ನು ಹಲ್ ಮಾಡಿದರೆ, ಅದು ಸೇಲ್ಸ್ ಟ್ಯಾಕ್ಸ್‌ಗೆ ಒಳಪಡುವುದಿಲ್ಲ. ಹಾಗೆ ರೈತರು ಉಪಯೋಗಿಸತಕ್ಕಂಥ ಭತ್ತ ಏನಿದೆ, ಅದು ಸೇಲ್ಸ್ ಟ್ಯಾಕ್ಸ್‌ಗೆ ಒಳಪಡದಂತೆ ನೋಡಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

iv) ತರಿಕೆರೆಗೆ ನೀರಿನ ತೊಂದರೆ ನೀಗಿಸಲು ತಕ್ಷಣ ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಬಿ.ಆರ್. ನೀಲಕಂಠಪ್ಪ.—ಸನ್ಮಾನ್ಯ ಅಧ್ಯಕ್ಷರೆ, ತರೀಕೆರೆ ತಾಲ್ಲೂಕಿನಲ್ಲಿ ಲಕ್ಕವಳ್ಳಿ ಜಲಾಶಯ ಇದೆ. ಅದು ಪೂರ್ಣವಾಗಿ ಉಪಯೋಗ ಆಗುತ್ತಿಲ್ಲ. ಅದೇ ರೀತಿ ನಮ್ಮ ತಾಲ್ಲೂಕಿನಲ್ಲಿ ಜಲಂದನ ಹಳ್ಳಿ ಜಲಾಶಯ ಇದೆ. ನಮಗೆ ನೀರಿನ ತೊಂದರೆ ಆಗಿರುವುದರಿಂದ ಈ ಕೂಡಲೇ ಪ್ರಾರಂಭಿಸಲು ಈ ವರ್ಷದ ಬಜೆಟ್ಟಿನಲ್ಲಿಯೇ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಜಲಂದನಹಳ್ಳಿ ಜಲಾಶಯ ಟೋಟಲ್ ಆಗಿ ಫೈಲ್ಯೂರ್ ಆಗಿದೆ. ಎಷ್ಟು ನೀರನ್ನು ಸಂಗ್ರಹಣೆ